ಕಳುಹಿಸುವುದು. ಇದರಿಂದ ವಿಷಯದ ಗ್ರಹಣವಾಗುತ್ತದೆ. ಇಲ್ಲಿಗೆ ಈ ಕ್ರಿಯೆಯ ವಿವರಣೆ ಸಂಪೂರ್ಣಗೊಳ್ಳುವುದಿಲ್ಲ. ಮೇಲೆ ಹೇಳಿದ ಎಲ್ಲ ಕ್ರಿಯೆಗಳೂ ನಡೆಯುವ ಅವಿಕಾರವಾದ ಹಿನ್ನೆಲೆಯೊಂದಿರಬೇಕು. ಅದು ಬದಲಾಗುತ್ತಿರುವ ನಮ್ಮ ವ್ಯಕ್ತಿತ್ವಕ್ಕೆ ಒಂದು ಏಕತೆಯನ್ನು ಕೊಡುವುದಾಗಿರಬೇಕು, ನಮ್ಮ ಹಲವು ಸಂವೇದನೆಗಳನ್ನು ಒಂದುಗೂಡಿಸಿ ಭಾವನೆಯನ್ನು ಸಂಪೂರ್ಣಗೊಳಿಸಬೇಕು. ಇಂತಹ ಗುರಿಯನ್ನು ಸಾಧಿಸ ಬೇಕಾದರೆ, ಇಂದ್ರಿಯ, ಮನಸ್ಸು, ಬುದ್ಧಿ – ಇವುಗಳಿಗೆ ಅತೀತವಾಗಿ ಯಾವುದೋ ಒಂದು ಸ್ಥಿರವಾದ ವಸ್ತು ಇರ ಬೇಕು.

ವಿಶ್ವವ್ಯಾಪಿಯಾದ ಮನಸ್ಸು ಅಥವಾ ಮಹತ್ತಿನ ಹಿಂದೆ ಆತ್ಮವಿದೆ. ಇದೇ ದೇವರು ಅಥವಾ ಪರಮಾತ್ಮ. ಅದೇ ರೀತಿ ನಮ್ಮ ಮನಸ್ಸು, ಬುದ್ಧಿಗಳಾಚೆಗೆ ಆತ್ಮವಿದೆ. ಅದೇ ದೇವರು ಅಥವಾ ಪರಮಾತ್ಮ. ಈ ಎರಡು ಆತ್ಮಗಳು ಬೇರೆಯಲ್ಲ, ಒಂದೇ ಆಗಿವೆ. ಮಹತ್ತಿನ ಆಚೆ ಇರುವ ಆತ್ಮವೇ ಬುದ್ಧಿಯ ಆಚೆ ಇರುವ ಆತ್ಮವೂ ಆಗಿರುವುದು. ಇದನ್ನೇ ವೇದಾಂತ ಬೋಧಿಸುತ್ತದೆ. ಅದ್ವೈತಿಗಳು ಇದನ್ನು ನಿರ್ಗುಣ ಎನ್ನುವರು. ಹೀಗೆ ವೇದಾಂತ ಸಿದ್ಧಾಂತದ ಪ್ರಕಾರ ಮಾನವನು ವಿಶ್ವದಲ್ಲಿ ಸರ್ವಶ್ರೇಷ್ಠವಾದ ಜೀವಿಯಾಗಿದ್ದಾನೆ. ಅವನ ಕರ್ಮಭೂಮಿಯಾದ ಈ ಜಗತ್ತೇ ಶ್ರೇಷ್ಠ ಲೋಕವಾಗಿದೆ. ಈ ಮಾನವ ಜೀವನವೇ ಇಡೀ ಸೃಷ್ಟಿಯ ಮಹಾಕೇಂದ್ರ. ಇದೊಂದೇ ಅತ್ಯುತ್ತಮ ಸ್ಥಿತಿ ಮತ್ತು ಪರಿಪೂರ್ಣತೆಯನ್ನು ಪಡೆಯಲು ಶ್ರೇಷ್ಠ ಅವಕಾಶ.


ಭಾರತೀಯ ದರ್ಶನದಲ್ಲಿ ಎರಡು ಅಭಿಪ್ರಾಯಗಳಿವೆ. ಒಂದು, ದೇಹ–ಮನಸ್ಸುಗಳ ಹಿಂದೆ, ಅವಿಕಾರಿಯಾದ, ಅಚಲವಾದ ವಸ್ತುವೊಂದಿದೆ ಎನ್ನುವುದು. ಮತ್ತೊಂದು ಬೌದ್ಧರು ಹೇಳುವಂತೆ, ಅವಿಕಾರಿಯಾದುದು, ಅಚಲವಾದುದು ಯಾವುದೂ ಇಲ್ಲ, ಬದಲಾವಣೆಯಲ್ಲದೆ ಮತ್ತಾವುದೂ ಇಲ್ಲ ಎನ್ನುವುದು. ಈ ಎರಡೂ ಭಿನ್ನಾಭಿಪ್ರಾಯಗಳಿಗೆ ಪರಿಹಾರ ದೊರಕುವುದು ಅದ್ವೈತ ಭಾವನೆಯಿಂದಲೇ. ಅದ್ವೈತಿಗಳು ಹೇಳುವ ಆತ್ಮವಿಚಾರವೇ ಇದಕ್ಕೆ ಪರಿಹಾರವಾಗಿದೆ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ.

ವಿಶ್ವವ್ಯಾಪಿಯಾದ ಅಸ್ತಿತ್ವವೊಂದು ಇದೆ. ಅದೇ ಹಲ ವಾಗಿ ತೋರುತ್ತಿದೆ. ಇದನ್ನೇ ಆತ್ಮ, ಬ್ರಹ್ಮ ಎನ್ನುವುದು. ಆತ್ಮದ ಮೇಲೆ ನಾಮ–ರೂಪಗಳು ಆರೋಪಗೊಂಡು ಈ ಜಗತ್ತೆಂಬ ಭ್ರಮೆಯನ್ನು ಕಲ್ಪಿಸುತ್ತದೆ. ದ್ವೈತಿಗಳ ಪ್ರಕಾರ, ಮನುಷ್ಯನು ಸತ್ತ ಮೇಲೆ ಯಾವುದೋ ಒಂದು ಲೋಕಕ್ಕೆ ಹೋಗುವನು. ಆದರೆ ಅದ್ವೈತಿ, ಯಾರೂ ಬರುವುದೂ ಇಲ್ಲ, ಹೋಗುವುದೂ ಇಲ್ಲ ಎನ್ನುತ್ತಾನೆ. ಅವನು ಹೀಗೆ ಕೇಳುತ್ತಾನೆ: "ನೀನು ಹೇಗೆ ಬಂದು ಹೋಗುವೆ? ನೀನು ಅನಂತನಾಗಿರುವೆ. ನೀನು ಹೋಗುವುದಕ್ಕೆ ಸ್ಥಳವೆಲ್ಲಿದೆ? ಹೋಗುವವರಾರು? ಬರುವವರಾರು? ನೀನಾಗಲೇ ಎಲ್ಲಿಲ್ಲ ಹೇಳು? ನೀನಾಗಲೇ ಇಲ್ಲದಿರುವ ಸ್ವರ್ಗವೆಲ್ಲಿದೆ? ಮಾನವನ ಆತ್ಮ ಸರ್ವವ್ಯಾಪಿ. ಅದು ಹೋಗುವುದೆಲ್ಲಿಗೆ? ಅದು ಎಲ್ಲಿಗೆ ಹೋಗಲಾಗದು? ಏಕೆಂದರೆ ಅದು ಎಲ್ಲಾ ಕಡೆಗಳಲ್ಲೂ ಇದೆ." ಇಂತಹ ಜ್ಞಾನ ಬಂದಾಗ, ಲೋಕಗಳಿವೆ ಎನ್ನುವ ಭ್ರಾಂತಿ ಮಾಯವಾಗುವುದು. ಇದನ್ನೇ ಮುಕ್ತಿ ಎನ್ನುವರು.

ಅದ್ವೈತದ ಪ್ರಕಾರ ನಮಗೆ ಕಾಣುವ ವಿಶ್ವವೆಲ್ಲ ಮಿಥ್ಯೆ. ಇದರಲ್ಲೆಲ್ಲಾ ದೊಡ್ಡ ಸುಳ್ಳು ಎಂದರೆ ನಾವು ದೇಹ ಎನ್ನುವುದು. ನಾವೆಂದೂ ದೇಹವಾಗಿರಲಿಲ್ಲ, ದೇಹ ವಾಗುವುದಿಲ್ಲ. ಈ ಸಂದರ್ಭದಲ್ಲಿ ಸ್ವಾಮೀಜಿ ಸಿಡಿಲಿನಂತೆ ಇರುವ ಈ ಮಾತುಗಳನ್ನು ಹೇಳುತ್ತಾರೆ: "ನಿಮಗೆ ನೀವು ಹೇಳಿಕೊಳ್ಳುವ ಅತಿ ಹೀನ ಸುಳ್ಳು ಎಂದರೆ ನೀವು ಹುಟ್ಟು ಪಾಪಿಗಳು, ದುಷ್ಟರು ಎಂದು ಭಾವಿಸುವುದು. ಇತರರನ್ನು ಪಾಪಿಗಳಂತೆ ಯಾರು ನೋಡುವರೋ ಅವರು ಮಾತ್ರ ಪಾಪಿಗಳು." ತಾನು ಆತ್ಮಸ್ವರೂಪನೆಂದು ಸಾಕ್ಷಾತ್ಕಾರ ಮಾಡಿಕೊಂಡಾಗ ಎಲ್ಲ ಭ್ರಾಂತಿಯೂ ಕೊನೆಗಾಣುವುದು, ದುಃಖ ಕೊನೆಗಾಣುವುದು, ಅಂಜಿಕೆಗಳೆಲ್ಲ ಒಂದೇ ಸಲ ಮಾಯವಾಗುವುವು, ಜನನ ಹೋಗುವುದು, ಅದರೊಂದಿಗೆ ಮರಣವೂ ಹೋಗುವುದು. ಯಾತನೆಗಳು ಹೋಗುವುವು, ಅವುಗಳೊಂದಿಗೆ ಸುಖವೂ ಹೋಗುವುದು. ಮರ್ತ್ಯಲೋಕ ಹೋಗುವುದು, ಅದರೊಂದಿಗೆ ಸ್ವರ್ಗವೂ ಹೋಗುವುದು. ದೇಹ ತೊಲಗುವುದು, ಅದರೊಂದಿಗೆ ಮನಸ್ಸೂ ತೊಲಗುವುದು. ಆಗ ಮನುಷ್ಯನಿಗೆ ಇಡೀ ವಿಶ್ವ ಮಾಯವಾಗುವುದು. ಹುಡುಕಾಟ, ಹೋರಾಟ – ಇವೆಲ್ಲವೂ ಎಂದೆಂದಿಗೂ ನಿಂತು ಹೋಗುವುದು. ಈ ಸಾಕ್ಷಾತ್ಕಾರದ ನಂತರ ವಿಶ್ವದ ಅಖಂಡ ಅಸ್ತಿತ್ವ ನಮಗೆ ಗೊತ್ತಾಗುವುದು. ನಾವೇ ಅಖಂಡ – ಅನಂತ – ಸ್ವರೂಪದವರಾಗುವೆವು. ಈ ಆತ್ಮವೊಂದೇ ಇರುವುದು. ಇಂತಹ ಆತ್ಮಸಾಕ್ಷಾತ್ಕಾರವು ಇಡೀ ಪ್ರಪಂಚಕ್ಕೇ ಕಲ್ಯಾಣಕಾರಿಯಾಗುವುದು. ಅಂತಹ ಮುಕ್ತಪುರುಷ ಮಾತ್ರ ನಿಜವಾಗಿ ಎಲ್ಲರಲ್ಲೂ ಭಗವಂತನನ್ನು ಕಂಡು ಪ್ರೀತಿಸಬಲ್ಲ. ಇಡೀ ಬ್ರಹ್ಮಾಂಡ ಅವನಿಗೆ ಸುಂದರವಾಗಿ ಕಾಣುವುದು. ಹೋರಾಟ, ದ್ವೇಷ, ಅಸೂಯೆ, ಪಾಪ – ಇವೆಲ್ಲ ಮಾಯವಾಗುವುವು. ಪ್ರೇಮವೆಂಬ ಒಂದೇ ಮಹಾನ್ ಆದರ್ಶ ಮಾತ್ರವೇ ಪ್ರಬಲವಾಗಿ ಉಳಿದುಕೊಳ್ಳುವುದು.

ಸ್ವಾಮೀಜಿ ಹೀಗೆ ಕರೆ ಕೊಡುತ್ತಾರೆ: "ನೀವೆಲ್ಲ ದೇವತೆಗಳು, ಎಲೈ ಮಾನವರೇ, ಪ್ರಾಣಿಗಳೇ, ಪಶುಪಕ್ಷಿಗಳೇ, ನೀವೆಲ್ಲಾ ಒಬ್ಬನೇ ಭಗವಂತನ ಆವಿರ್ಭಾವ..." ಇಡೀ ಪ್ರಪಂಚದಲ್ಲೆಲ್ಲಾ ಈ ಭಾವನೆಗಳನ್ನು ಪ್ರಸಾರ ಮಾಡಬೇಕಾದ ಸಮಯ ಒದಗಿ ಬಂದಿದೆ ಎಂದು ಸ್ವಾಮೀಜಿ ಹೇಳುತ್ತಾರೆ. ಇವು ಪಾಪಿ–ಪುಣ್ಯ ವಂತರ, ಸ್ತ್ರೀ–ಪುರುಷ–ಬಾಲಕರ, ಪಂಡಿತ–ಪಾಮರರ ಸಾಮಾನ್ಯ ಆಸ್ತಿಯಾಗಬೇಕಾಗಿದೆ. ಆಗ ಇದು ಇಡೀ ವಿಶ್ವ ವನ್ನು ವ್ಯಾಪಿಸುವುದು. ಇದೇ ಸ್ವಾಮಿ ವಿವೇಕಾನಂದರು ಕಂಡ ಭವ್ಯ ಕನಸು. ಇದೇ ಜ್ಞಾನಯೋಗದ ಪರಮ ಉದ್ದೇಶ.

# ಗುರುಸೇವಾಧುರೀಣ – ಸ್ವಾಮಿ ರಾಮಕೃಷ್ಣಾನಂದ



ಬ್ರಹ್ಮಚಾರಿ ಸುವಿಮಲಚೈತನ್ಯ

**ಭಾ**ರತದ ಹಿರಿಮೆ ಗರಿಮೆಗಳನ್ನು ಜಗತ್ತಿಗೆ ಮತ್ತೊಮ್ಮೆ ತಿಳಿಸಿಕೊಟ್ಟು, ವಿದೇಶದಲ್ಲಿ ಸನಾತನ ಸಂಸ್ಕೃತಿಯ ವಿಜಯ ಪತಾಕೆಯನ್ನು ಹಾರಿಸಿ, ಸ್ವದೇಶಕ್ಕೆ ಹಿಂತಿರುಗಿ, ತಮ್ಮ ಸಿಂಹ ವಾಣಿಯಿಂದ ಜನತೆಯಲ್ಲಿ ಚೈತನ್ಯಶಕ್ತಿಯನ್ನು ಹರಿಸಿದವರು – ವಿಶ್ವಮಾನವ, ವಿಶ್ವವಿಜೇತ, ವಿಶ್ವಾಚಾರ್ಯ ಸ್ವಾಮಿ ವಿವೇಕಾನಂದರು. ಈ ಪ್ರವಾದಿ ಸಂತರ ೧೫೦ನೇ ಜನ್ಮದಿನೋತ್ಸವವು ಜಗತ್ತಿನಾದ್ಯಂತ ವಿಜೃಂಭಣೆಯಿಂದ ನಡೆಯುತ್ತಿದೆ. ಭಾರತೀಯರು ತಮ್ಮ ಅತೀತದ ವೈಭವದಲ್ಲಿ ಅಪನಂಬಿಕೆ ಮತ್ತು ತಮ್ಮಲ್ಲಿ ಆತ್ಮವಿಶ್ವಾಸ ಕಳೆದುಕೊಂಡು, ದಾಸ್ಯತ್ವವನ್ನು ಅಪ್ಪಿಕೊಂಡ ಸಂಧಿಕಾಲ ಅದಾಗಿತ್ತು. ಅಂತಹ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಸನಾತನ ಧರ್ಮದ ಮತ್ತು ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಹಿರಿಮೆ ಏನೆಂಬುದನ್ನು ಜಗತ್ತಿನಾದ್ಯಂತ ಸಾರಿದರು.

ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯಾಗ್ರಣಿಯಾದ ಸ್ವಾಮಿ ವಿವೇಕಾನಂದರ ಹೆಸರು ಎಲ್ಲರಿಗೂ ತಿಳಿದೇ ಇದೆ. ಆದರೆ ಅವರ ಉಳಿದ ಶಿಷ್ಯರ ಪರಿಚಯ ಕಡಿಮೆ. ಅಂತಹ ನೇರ ಶಿಷ್ಯರಲ್ಲೊಬ್ಬರು ಸ್ವಾಮಿ ರಾಮಕೃಷ್ಣಾನಂದರು. ಆ ಮಹಾನ್ ಚೇತನವೂ ಸಹ ಜನಿಸಿ ಇಂದಿಗೆ ೧೫೦ ವರ್ಷಗಳು ಕಳೆದಿವೆ. ಅವರು ಶ್ರೀರಾಮಕೃಷ್ಣರ ಭಾವ ಪ್ರಚಾರಕ್ಕಾಗಿ, ದಕ್ಷಿಣ ಭಾರತಕ್ಕೆ ಸ್ವಾಮಿ ವಿವೇಕಾನಂದರಿಂದಲೇ ಕಳಿಸಲ್ಪಟ್ಟ ಸಂನ್ಯಾಸಿ ವರೇಣ್ಯರು. ಶ್ರೀರಾಮಕೃಷ್ಣ, ಶ್ರೀ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಮತ್ತು ಉಪದೇಶಗಳ ಪ್ರಚಾರವನ್ನು ದಕ್ಷಿಣರಾಜ್ಯಗಳಲ್ಲಿ ಆರಂಭಿಸಿದ ಮೊದಲ ಹರಿಕಾರ. ರಾಮಕೃಷ್ಣ ಆಂದೋಲನಕ್ಕೆ ದಕ್ಷಿಣಭಾರತದಲ್ಲಿ ಸುಭದ್ರ ಬುನಾದಿಯನ್ನು ಹಾಕಲು ತಮ್ಮ ಶರೀರವನ್ನೇ ಗಂಧದಂತೆ ತೇಯ್ದ ತ್ಯಾಗಿಪುರುಷ.

ಚೆನ್ನೈನಲ್ಲಿರುವ ರಾಮಕೃಷ್ಣ ಮಠವನ್ನು ಸ್ಥಾಪಿಸುವುದರ ಮೂಲಕ, ದಕ್ಷಿಣಭಾರತದಲ್ಲಿ ರಾಮಕೃಷ್ಣ–ವಿವೇಕಾನಂದ ಆಂದೋಲನಕ್ಕೆ ಅಂಕುರಾರ್ಪಣೆ ಮಾಡಿದವರು ಸ್ವಾಮಿ ರಾಮಕೃಷ್ಣಾನಂದರು. ಹಾಗೆಯೇ, ಬೆಂಗಳೂರು ನಗರದಲ್ಲಿ ಮಠವನ್ನು ಸ್ಥಾಪಿಸಿದ ಮತ್ತು ಮೈಸೂರಿನಲ್ಲಿ ವಿವೇಕಾನಂದರು ಬಿತ್ತಿದ ಬೀಜವನ್ನು ಬೆಳೆಸಿದ ಶ್ರೇಯಸ್ಸು ಕೂಡ ಅವರಿಗೇ ಸಲ್ಲುತ್ತದೆ. ಹೀಗೆ ಈ ಮಹಾನ್‌ಪುರುಷರು ಕನ್ನಡದ ಜನತೆಗೆ ನೀಡಿದ ಅಮೂಲ್ಯ ಕೊಡುಗೆಯ ನೆನಪಿಗಾಗಿ ಅವರ ಪಾದಪದ್ಮಗಳಲ್ಲಿ ಇದೊಂದು ಪುಟ್ಟ ಸ್ಮರಣಾಂಜಲಿ.

**ಸ್ವಾಮಿ ರಾಮಕೃಷ್ಣಾನಂದರು ದಕ್ಷಿಣಭಾರತದಲ್ಲಿ ರಾಮಕೃಷ್ಣ ಭಾವಧಾರೆಯನ್ನು ಪರಿಚಯಿಸಿದ ಮಹನೀಯರು. ಇವರ ೧೫೦ನೆ ಜಯಂತಿಯನ್ನೂ ಈಗ ಕೊಂಡಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ನೆಚ್ಚಿನ ಆಧ್ಯಾತ್ಮಿಕ ಸಹೋದರರಾದ ಪೂಜ್ಯ ಸ್ವಾಮಿಗಳ ಬಗ್ಗೆ ಆತ್ಮೀಯವಾದ ಪರಿಚಯ ಲೇಖನವೊಂದನ್ನು ಪ್ರಕಟಿಸುತ್ತಿದ್ದೇವೆ. ಇದರ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

ಆದರ್ಶ ಭಕ್ತನನ್ನು ಕುರಿತು ಸ್ವಾಮಿ ರಾಮಕೃಷ್ಣಾನಂದರು ಹೀಗೆ ಹೇಳುತ್ತಾರೆ: "ನಿಜವಾದ ಭಕ್ತಿಯು ನಿಃಸ್ವಾರ್ಥತೆಯಿಂದ ಕೂಡಿರುತ್ತದೆ. ಅಲ್ಲಿ ಮೇಲು-ಕೀಳು ಎಂಬ ಯಾವುದೇ ಭೇದ ಭಾವಗಳಿರುವುದಿಲ್ಲ. ಭಕ್ತನಿಗೆ ತನ್ನ ಇಷ್ಟದೇವತೆಯನ್ನು ತೃಪ್ತಿಪಡಿಸುವುದರ ಯೋಚನೆಯೇ ಹೊರತು, ಅವನಿಂದ ಏನನ್ನೂ ಭಕ್ತನು ಅಪೇಕ್ಷಿಸುವುದಿಲ್ಲ. ಭಕ್ತನು ಒಬ್ಬ ಜ್ಞಾನಿಗಿಂತಲೂ ಎತ್ತರದವನು. ಏಕೆಂದರೆ ಜ್ಞಾನಿಯು ಬರೀ ಆತ್ಮಸಂತುಷ್ಟನಾಗಿರುತ್ತಾನೆ. ತನ್ನಲ್ಲಿ ತಾನು ಆನಂದವನ್ನು ಪಡೆಯುವುದೇ ಅವನಿಗೆ ಮುಖ್ಯ ಗುರಿ. ಭಕ್ತನಾದರೋ ಆನಂದವನ್ನು ತಾನು ಹೊಂದಿ, ಬೇರೆಯವರಿಗೂ ಉಣಬಡಿಸುತ್ತಾನೆ."

ಶ್ರೀರಾಮಕೃಷ್ಣರ ಗೃಹೀಭಕ್ತರೊಬ್ಬರಲ್ಲಾದ ಡಾ. ರಾಮಚಂದ್ರ ದತ್ತರು ಸ್ವಾಮಿ ರಾಮಕೃಷ್ಣಾನಂದರನ್ನು ಕುರಿತು ಹೀಗೆ ಹೇಳುತ್ತಾರೆ: "ಆತ್ಮೀಯ ಸಹೋದರನೇ, ನೀನು ಮನುಷ್ಯಜನ್ಮವನ್ನು ತಳೆದು ಮಾನವ ಜನ್ಮದ ಗುರಿ ಮತ್ತು ಕರ್ತವ್ಯಗಳನ್ನು ತಿಳಿದುಕೊಂಡಿರುವೆ. ಆದ್ದರಿಂದಲೇ ಶ್ರೀರಾಮಕೃಷ್ಣರ ವಿಶೇಷ ಕೃಪೆ ನಿನ್ನ ಮೇಲಿದೆ. ಅವರ ದಿವ್ಯ ಕೃಪೆಯಿಂದ, ಅವರ ಸೇವಕರಲ್ಲಿ ಒಬ್ಬನಾದ ನೀನು ಅತ್ಯಂತ ಉತ್ತಮಸ್ಥಾನವನ್ನು ಪಡೆದಿದ್ದೀಯೆ. ನೀನು ಅವರ ಶ್ರೇಷ್ಠನಾದ ಪುತ್ರ ಮತ್ತು ಸೇವಕನು ಕೂಡ. ನಿನ್ನ ಗುರುಸೇವೆಗೆ ಸರಿಸಾಟಿ ಇಲ್ಲ." ಅವರ ಜೀವನದ ಕೆಲವು ಘಟನೆಗಳನ್ನು ಅವಲೋಕಿಸಿದಾಗ ಇದರ ಸತ್ಯತೆ ಅರಿವಾಗುತ್ತದೆ.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ನರೇಂದ್ರನ ನೇತೃತ್ವದಲ್ಲಿ ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರು ಸಂನ್ಯಾಸವನ್ನು ಸ್ವೀಕರಿಸಿದರು. ಕೊಲ್ಕತೆಯ ಬಾರಾನಗರ ಎಂಬ ಸ್ಥಳದಲ್ಲಿದ್ದ ಒಂದು ಪಾಳು ಕಟ್ಟಡವೇ ಅವರು ವಾಸಿಸುವ ಸ್ಥಾನವಾಯಿತು. ಪ್ರಾಪಂಚಿಕ ಕುಂದು-ಕೊರತೆಗಳು ಅವರನ್ನು ವಿಚಲಿತಗೊಳಿಸಲಿಲ್ಲ. ಅನ್ನ ನೀರುಗಳ ಹಂಗಿಲ್ಲದೆ, ಕಠಿಣ ತಪಸ್ಸು ಸಾಧನೆಯಲ್ಲಿ ಹಗಲಿರುಳೆನ್ನದೆ ಅವರು ಮುಳುಗಿಹೋದರು. ಸಾಧನೆಗೆಂದು ಕೆಲವರು ಪರಿವ್ರಾಜಕರಾಗಿ ಮಠವನ್ನು ಬಿಟ್ಟು, ತೀರ್ಥಯಾತ್ರೆಯನ್ನು ಕೈಗೊಂಡರು. ಆದರೆ ಸ್ವಾಮಿ ರಾಮಕೃಷ್ಣಾನಂದರು ಬೇರೆಲ್ಲೂ ಹೋಗಲಿಲ್ಲ. **"ಸಕಲ ತೀರ್ಥ, ಸಕಲ ಶಾಸ್ತ್ರ, ಸಾರ ನೀನಿಹೆ"** ಎನ್ನುವ ಭಾವ ಅವರದು. ಶ್ರೀರಾಮಕೃಷ್ಣರ ಪೂಜೆ, ನೈವೇದ್ಯ, ಕೈಂಕರ್ಯಗಳನ್ನು ತನ್ನ ಗುರುವು, ಸ್ಥೂಲ ಶರೀರದಲ್ಲಿದ್ದಾಗ ಹೇಗೆ ಸ್ವೀಕರಿಸುತ್ತಿದ್ದರೋ, ಹಾಗೆಯೇ ಈಗಲೂ ಸ್ವೀಕರಿಸುತ್ತಿರುವರು ಎಂಬ ಪವಿತ್ರಭಾವವೇ ಅವರ ಸಾಧನೆಯಾಯಿತು. ಇತರ ಗುರುಭಾಯಿಗಳು ಆಧ್ಯಾತ್ಮಿಕ ಸಾಧನೆಗಾಗಿ ಪರಿವ್ರಾಜಕರಾದರೂ, ಇವರು ಮಾತ್ರ ಬಾರಾನಗರ ಮಠವನ್ನು ಬಿಟ್ಟು ಎಂದೂ ಕದಲಲಿಲ್ಲ.

ಭಕ್ತಿಯನ್ನು ಪ್ರತಿಪಾದಿಸುವ ಮಹಾಗ್ರಂಥಗಳಲ್ಲಿ ಶಿರೋರತ್ನದಂತಿರುವ ಭಾಗವತವು ಭಕ್ತಿಯ ವಿವಿಧ ಬಗೆಗಳನ್ನು ಕುರಿತು ಹೀಗೆ ವಿವರಿಸುತ್ತದೆ:

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ।**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ॥**

(ಭಾಗವತ, ೭-೫-೨೩, ೨೪)

"ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ – ಶ್ರೀಹರಿಗೆ ಭಕ್ತನು ಅರ್ಪಿಸುವ ಇವು 'ನವವಿಧ ಭಕ್ತಿ' ಎಂದು ಅನ್ನಿಸಿಕೊಳ್ಳುತ್ತದೆ."

ಸ್ವಾಮಿ ರಾಮಕೃಷ್ಣಾನಂದರು ಇವುಗಳಲ್ಲಿ ದಾಸ್ಯಭಾವವನ್ನು ಅನುಸರಿಸಿಕೊಂಡು ತಮ್ಮ ಗುರುದೇವರ ರೂಪದಲ್ಲಿರುವ ಭಗವಂತನ ಅರ್ಚನೆ, ವಂದನೆ, ಪಾದಸೇವನೆಗಳನ್ನು ಕೈಗೊಂಡರು. ಶ್ರೀರಾಮಕೃಷ್ಣರ ಭಾವಚಿತ್ರ ಮತ್ತು 'ಆತ್ಮಾರಾಮ'ವೆಂಬ ಹೆಸರಿನ ಅವರ ಅಸ್ಥಿಕಲಶ – ಇವರೆಡೂ ಸ್ವಾಮಿ ರಾಮಕೃಷ್ಣಾನಂದರ ಪಾಲಿಗೆ ಜೀವಂತವಾಗಿದ್ದವು. ಅವರು ಮಾಡುತ್ತಿದ್ದ ಪೂಜೆ, ಆರತಿ, ನೈವೇದ್ಯಗಳು ನೋಡುವವರ ಕಣ್ಣಿಗೆ ಆಶ್ಚರ್ಯವನ್ನು ಉಂಟುಮಾಡುತ್ತಿದ್ದವು. ಅವರ ಪೂಜಾಚರಣೆ ನಿಜವಾದ ಭಕ್ತಿ ಏನೆಂಬುದನ್ನು ಎಲ್ಲರಿಗೂ ತೋರ್ಪಡಿಸುತ್ತಿತ್ತು. ಅಷ್ಟೇ ಅಲ್ಲ, ಆ ಪರಾಭಕ್ತಿಯು ಅವರ ಇಷ್ಟದೇವತೆಯ ಪರಿಧಿಯನ್ನೂ ಮೀರುತ್ತಿತ್ತು. ತಮ್ಮ ಗುರುಭಾಯಿಗಳಿಗೆ ಆಹಾರವನ್ನುಣ್ಣಿಸುವ, ಶಾರೀರಿಕ ಆರೈಕೆಯನ್ನೂ ಮಾಡುವ ಅವರ ಮಾತೃವಾತ್ಸಲ್ಯ ಅಪೂರ್ವವಾದುದು! ಸ್ವಾಮಿ ವಿವೇಕಾನಂದರು ಮತ್ತು ಸಹೋದರ ಸಂನ್ಯಾಸಿಗಳು ಅಹರ್ನಿಶಿ ಸಾಧನೆ ಮಾಡುತ್ತಿದ್ದರಿಂದ ಅವರಿಗೆ ಅನ್ನ-ನೀರಿನ ಪರಿವೆಯೇ ಇರುತ್ತಿರಲಿಲ್ಲ. ಸ್ವಾಮಿ ರಾಮಕೃಷ್ಣಾನಂದರು ದೇವರ ಪೂಜೆಯನ್ನು ಮಾಡಿ, ಉಳಿದ ಸಮಯದಲ್ಲಿ ಬೇಡಿತಂದ ಪದಾರ್ಥಗಳಿಂದ ಅಡುಗೆ ಮಾಡಿ, ದೇವರಿಗೆ ನಿವೇದನೆ ಮಾಡಿ, ಅದನ್ನು ಪ್ರಸಾದರೂಪದಲ್ಲಿ, ತಮ್ಮ ಗುರುಭಾಯಿಗಳಿಗೆ ಉಣಬಡಿಸುತ್ತಿದ್ದರು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಶಶಿಯು (ಸ್ವಾಮಿ ರಾಮಕೃಷ್ಣಾನಂದರ ಹಿಂದಿನ ಹೆಸರು) ಮಠದ ಮುಖ್ಯ ಆಧಾರಸ್ತಂಭವಾಗಿದ್ದನು. ಅವನಿಲ್ಲದೆ ಇದ್ದಿದ್ದರೆ ನಾವು ಬದುಕುಳಿಯುವುದೂ ಕಷ್ಟಸಾಧ್ಯವಾಗಿತ್ತು. ನಾವೆಲ್ಲರೂ ಧ್ಯಾನ-ಜಪ ಎಂದು ಕುಳಿತರೆ, ಅವನು ನಮಗಾಗಿ ಅಡುಗೆ ಮಾಡಿ, ನಮಗೋಸ್ಕರ ಗಂಟೆಗಳ ಕಾಲ ಕಾಯುತ್ತಿದ್ದನು. ಕೆಲವೊಮ್ಮೆ ಬಲಾತ್ಕಾರವಾಗಿ ನಮ್ಮನ್ನು ಎಬ್ಬಿಸಿ, ಊಟ ಮಾಡಿಸುತ್ತಿದ್ದನು. ಆನಂದದಿಂದ ಮಠದ ಎಲ್ಲಾ ಕೆಲಸಗಳನ್ನೂ ತಾನೊಬ್ಬನೇ ಮಾಡುತ್ತಿದ್ದನು."

ಬಾರಾನಗರ ಮಠದಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಕಡುಬಡತನವನ್ನು ಅನುಭವಿಸಿದರು. ಮೈಮುಚ್ಚಿಕೊಳ್ಳಲು ಬೇಕಾದಷ್ಟು ಬಟ್ಟೆಯೂ ಅವರ ಬಳಿ ಇರಲಿಲ್ಲ. ಹಣದ ಅಭಾವದಿಂದಾಗಿ ಎಷ್ಟೋ ಬಾರಿ ಊಟಕ್ಕೆ ಉಪ್ಪನ್ನು ಕೊಳ್ಳಲೂ

ಸಾಧ್ಯವಾಗುತ್ತಿರಲಿಲ್ಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸ್ವಾಮಿ ರಾಮಕೃಷ್ಣಾನಂದರು ಬಾರಾನಗರ ಹೈಸ್ಕೂಲಿನಲ್ಲಿ ಪಾಠ ಮಾಡಿ, ಬಂದ ಹಣದಿಂದ ಮಠವನ್ನು ನಡೆಸಲು ಪ್ರಯತ್ನಿಸುತ್ತಿದ್ದರು. "ಶಶಿಯು ನಿಜವಾಗಿಯೂ ಮಠದ ಸಂಸ್ಥಾಪಕ" ಎಂದು ಸ್ವಾಮಿ ಪ್ರೇಮಾನಂದರು ಇವರನ್ನು ಕುರಿತು ಹೇಳಿರುವುದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬೇಕು. ಇದಕ್ಕೆ ತಕ್ಕರೀತಿಯಲ್ಲಿ, ಸ್ವಾಮಿ ರಾಮಕೃಷ್ಣಾನಂದರು ಸುಮಾರು ಹನ್ನೊಂದು ವರ್ಷಗಳ ಕಾಲ, ಮಠದ ಸೇವಾಕಾರ್ಯಗಳನ್ನು ಚಾಚೂ ತಪ್ಪದೆ, ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸ್ವಾಮಿ ವಿವೇಕಾನಂದರು ವೇದಾಂತದ ಉಪದೇಶಗಳನ್ನು ಪಾಶ್ಚಾತ್ಯ ದೇಶಗಳಿಗೆ ನೀಡಿ, ಭಾರತದ ಕೀರ್ತಿಯನ್ನು ಮತ್ತೊಮ್ಮೆ ಪಸರಿಸಿ, ೧೮೯೭ರಲ್ಲಿ ತಮ್ಮ ತಾಯ್ನಾಡಿಗೆ ಮರಳಿದರು. ಭಾರತಾಂಬೆಯ ಈ ಹೆಮ್ಮೆಯ ಪುತ್ರನಿಗೆ ಎಲ್ಲೆಡೆ ವೈಭವದ ಸ್ವಾಗತ ಕಾದಿತ್ತು. ಸ್ವಾಮಿ ವಿವೇಕಾನಂದರು ಹಲವಾರು ಸ್ಥಳಗಳಿಗೆ ಭೇಟಿಯನ್ನಿತ್ತು ಚೆನ್ನೈಗೆ ಬಂದರು. ಅಲ್ಲಿ ಅವರಿಗೆ ಭವ್ಯ ಸ್ವಾಗತವನ್ನು ನೀಡ ಲಾಯಿತು. ಅವರು ಅಲ್ಲಿ ಅನೇಕ ಉಪನ್ಯಾಸಗಳನ್ನು ನೀಡಿದರು. ಅವರ ಅದ್ಭುತ ವಾಗ್ಝರಿಯಲ್ಲಿ ಮಿಂದು ಪುನೀತರಾದ ಚೆನ್ನೈನ ಜನತೆ ರಾಮಕೃಷ್ಣ ಮಠದ ಕೇಂದ್ರ ವನ್ನು ಶಾಶ್ವತವಾಗಿ ಚೆನ್ನೈನಲ್ಲಿ ಪ್ರಾರಂಭಿಸಲು, ತಮ್ಮ ಸಹೋದರ ಸಂನ್ಯಾಸಿಯೊಬ್ಬರನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿತು. ಪ್ರತ್ಯುತ್ತರವಾಗಿ ಸ್ವಾಮಿ ವಿವೇಕಾನಂದರು, "ನಿಮಗಿಂತಲೂ ಸಂಪ್ರದಾಯಸ್ಥನಾಗಿರುವ, ಪೂಜೆ, ಜಪ-ಧ್ಯಾನಗಳಲ್ಲಿ ನಿಮಗಿಂತಲೂ ನಿಷ್ಣಾತನಾಗಿರುವ ವಿಶಿಷ್ಟವಾದ ವ್ಯಕ್ತಿಯನ್ನು ಕಳುಹಿಸುತ್ತೇನೆ" ಎಂದರು. ಅದರ ಫಲವಾಗಿ ಸ್ವಾಮಿ ರಾಮಕೃಷ್ಣಾನಂದರನ್ನು ಸ್ವಾಮಿ ವಿವೇಕಾ ನಂದರು ದಕ್ಷಿಣ ಭಾರತಕ್ಕೆ ಕಳುಹಿಸಿದರು. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಸ್ವಾಮಿ ರಾಮಕೃಷ್ಣಾನಂದರ ನಿರ್ಲಿಪ್ತ ಭಾವ. ಅನೇಕ ವರ್ಷಗಳ ಕಾಲ ಬಾರಾನಗರ ಮಠದಲ್ಲಿ ಸೇವಾಕಾರ್ಯಗಳನ್ನು ಮಾಡುತ್ತಿದ್ದ ಅವರು, ಸ್ವಾಮಿ ವಿವೇಕಾನಂದರು ದಕ್ಷಿಣಭಾರತಕ್ಕೆ ಹೋಗಲು ಹೇಳಿದಾಗ ಮರುಮಾತನಾಡದೆ, ಯಾವುದೇ ಅಳುಕು, ಬೇಜಾರಿಲ್ಲದೆ, ತಮ್ಮ ನಾಯಕನ ಆಣತಿಯಂತೆ ಹೊರಟೇಬಿಟ್ಟರು. ಇದು ಒಬ್ಬ ಆದರ್ಶ ಕರ್ಮಯೋಗಿಯ ಲಕ್ಷಣವಲ್ಲದೆ, ಒಬ್ಬ ಆದರ್ಶ ಭಕ್ತನ ಅಪೂರ್ವ ಗುಣವೂ ಆಗಿದೆ.

೧೮೯೭ರಲ್ಲಿ ಸ್ವಾಮಿ ಸದಾನಂದರ ಜೊತೆ ಸ್ವಾಮಿ ರಾಮಕೃಷ್ಣಾನಂದರು ಕೊಲ್ಕತಾದಿಂದ ಹಡಗಿನಲ್ಲಿ ಚೆನ್ನೈಗೆ ಪಯಣಿಸಿದರು. ವಿವೇಕಾನಂದರ ಪ್ರಮುಖ ಶಿಷ್ಯರಲ್ಲೊಬ್ಬರಾದ ಅಳಸಿಂಗ ಪೆರುಮಾಳ್ ಅವರು ಐಸ್ ಹೌಸ್ (ಇಂದಿನ ಹೆಸರು 'ವಿವೇಕಾನಂದ ಇಲ್ಲಂ') ಬಳಿಯಿದ್ದ ಚಿಕ್ಕ ಕೋಣೆ ಯೊಂದರಲ್ಲಿ ತಂಗಲು ವ್ಯವಸ್ಥೆಯನ್ನು ಮಾಡಿದ್ದರು. ತದ ನಂತರ ರಾಮನಾಡಿನ ರಾಜನಾದ ಭಾಸ್ಕರ ಸೇತುಪತಿ ಮತ್ತು ಕೆಲವು ಭಕ್ತರ ಸಹಕಾರದಿಂದ ಐಸ್ ಹೌಸ್ ಅನ್ನು ಬಾಡಿಗೆಗೆ ಪಡೆದುಕೊಂಡು, ಅಲ್ಲಿ ರಾಮಕೃಷ್ಣಾನಂದರ ವಾಸ್ತವ್ಯಕ್ಕೆ ಅವಕಾಶ ಮಾಡಲಾಯಿತು.

ಆಧ್ಯಾತ್ಮಿಕ ಪಿಪಾಸುಗಳ ಆಹ್ವಾನದ ಮೇರೆಗೆ ರಾಮ ಕೃಷ್ಣಾನಂದರು ಚೆನ್ನೈನ ಹಲವಾರು ಸ್ಥಳಗಳಿಗೆ ಉಪನ್ಯಾಸ ಗಳನ್ನು ನೀಡಲು ಹೋಗುತ್ತಿದ್ದರು. ಅವರ ಹೆಸರು ಕ್ರಮೇಣ ಮನೆಮಾತಾಯಿತು. ಚೆನ್ನೈನ ಸೈದಾಪೇಟೆ, ಜಾರ್ಜ್‌ಟೌನ್, ಟ್ರಿಪ್ಲಿಕೇನ್, ಮೈಲಾಪುರ ಮುಂತಾದ ಪ್ರದೇಶಗಳಲ್ಲಿ ಉಪನ್ಯಾಸಗಳನ್ನು ಮಾಡಲು ಅವರು ಹೋಗುತ್ತಿದ್ದರು. ಕೆಲವೊಮ್ಮೆ ವಾರಕ್ಕೆ ಹನ್ನೆರಡಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡುತ್ತಿದ್ದರು. ಉಪನ್ಯಾಸಗಳಿಗೆ ಕೆಲವೊಮ್ಮೆ ಕುದುರೆ ಗಾಡಿಯಲ್ಲಿ ಹೋದರೆ, ಅನೇಕ ಬಾರಿ ನಡೆದುಕೊಂಡೇ ಹೋಗುತ್ತಿದ್ದರು. ಇಷ್ಟಲ್ಲದೆ ಮಠದ ಪೂಜಾಕಾರ್ಯ ಮತ್ತು ಇತರ ಚಟುವಟಿಕೆಗಳನ್ನು ಕೂಡ ಯಾರ ಸಹಾಯವೂ ಇಲ್ಲದೆ ಏಕಾಂಗಿಯಾಗಿ ಮಾಡುತ್ತಿದ್ದರು. ಪಂಚದಶಿ, ಭಗವದ್ಗೀತೆ, ಭಾಗವತ, ಶ್ರೀರಾಮಕೃಷ್ಣ ವಚನವೇದ ಮುಂತಾದವು ಅವರ ಉಪನ್ಯಾಸಗಳ ಮುಖ್ಯ ವಿಷಯಗಳಾಗಿದ್ದವು. ಅವರು ತುಂಬ ಕ್ಲಿಷ್ಟವಾದ, ಗಹನವಾದ ವಿಚಾರಗಳನ್ನು ಕೂಡ ಒಂದು ಚಿಕ್ಕ ಮಗುವಿಗೂ ಅರ್ಥವಾಗುವಂಥ ಸರಳ ಶೈಲಿಯಲ್ಲಿ ವಿವರಿಸುತ್ತಿದ್ದರು. ಅವರ ಉಪನ್ಯಾಸವು ಒಂದು ಸುಂದರ ವಾದ ಸಂವಾದದಂತೆ ಇದ್ದು, ಭಕ್ತರಿಗೆ ಮುದ ನೀಡುತ್ತಿತ್ತು; ವಿಷಯವು ಸ್ಪಷ್ಟವಾಗಿ ಅರ್ಥವಾಗುತ್ತಿತ್ತು, ಎಲ್ಲರ ಮನದಲ್ಲಿ ಚಿರಮುದ್ರೆಯನ್ನು ಒತ್ತುತ್ತಿತ್ತು. ಹೀಗಾಗಿ ಅವರ ಕೀರ್ತಿಯು ಎಲ್ಲೆಡೆ ಪಸರಿಸಿತು. ಜನರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅವರ ಉಪನ್ಯಾಸಗಳನ್ನು ಕೇಳಲು ಬರತೊಡಗಿದರು.

ಆಶ್ಚರ್ಯದ ಸಂಗತಿಯೆಂದರೆ, ಆರಂಭದಲ್ಲಿ ಇವರು ಉಪನ್ಯಾಸಗಳನ್ನು ನೀಡಲು ಹೋದಾಗ, ಬೆರಳೆಣಿಕೆಯಷ್ಟು ಜನರು ಮಾತ್ರ ಇರುತ್ತಿದ್ದರು. ಹಾಗಿದ್ದಾಗ್ಯೂ ಏಕ ರೀತಿಯ ಶ್ರದ್ಧೆಯಿಂದ ರಾಮಕೃಷ್ಣಾನಂದರು ಉಪನ್ಯಾಸವನ್ನು ನೀಡು ತ್ತಿದ್ದರು. ಒಮ್ಮೆ ಒಬ್ಬರೂ ಬಂದಿರಲಿಲ್ಲ! ಆದರೆ ಇವರು ನಿಗದಿತ ಸಮಯವನ್ನು ಅಲ್ಲಿಯೇ ಪೂರ್ಣವಾಗಿ ಕಳೆದು ವಾಪಸ್ಸು ಬಂದರು. ಬ್ರಹ್ಮಚಾರಿಯೊಬ್ಬನು ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದನು. ಅದಕ್ಕೆ ರಾಮಕೃಷ್ಣಾನಂದರು ಹೀಗೆ ಹೇಳುತ್ತಾರೆ: "ನೋಡು, ನಾನು ಉಪನ್ಯಾಸವನ್ನು ಬರೀ ಜನರಿಗೋಸ್ಕರ ಮಾಡುವುದಿಲ್ಲ. ಅದನ್ನು ನನ್ನ ಗುರುದೇವರ ಪೂಜೆ, ಸೇವೆಯೆಂದು ಮಾಡುತ್ತೇನೆ. ಆದ್ದರಿಂದ ಜನರು ಬರುವುದು, ಬಾರದೆ ಇರುವುದು ನನಗೆ ಮುಖ್ಯವಲ್ಲ. ನಾನು ಈ ಮೂಲಕ ನನ್ನ ಗುರುದೇವರ ಸೇವೆಯನ್ನು ಮಾಡಿ, ಅದನ್ನು ಅವರ ಪದತಲಕ್ಕೆ ಸಮರ್ಪಿಸುತ್ತೇನೆ," ಇದು ಕೆಲಸ, ಅದು ಪೂಜೆಯೆಂಬ ಭೇದವು ಸ್ವಾಮಿ ರಾಮಕೃಷ್ಣಾನಂದರಲ್ಲಿ ಮಾಯವಾಗಿತ್ತು. ಅವರು ಎಲ್ಲ

ಕಾರ್ಯಗಳನ್ನೂ ಸಮಾನಭಾವದಿಂದ ಕಂಡು, ಗುರುದೇವರ ಪಾದಗಳಿಗೆ ಸಮರ್ಪಿಸುತ್ತಿದ್ದರು.

ಸ್ವಾಮಿ ರಾಮಕೃಷ್ಣಾನಂದರು ಐಸ್ ಹೌಸ್‌ನಲ್ಲಿದ್ದುಕೊಂಡೇ, ಶ್ರೀರಾಮಕೃಷ್ಣರ ಪೂಜೆ, ಭಕ್ತರ ಭೇಟಿ ಮುಂತಾದ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಐಸ್ ಹೌಸ್‌ನ ಯಜಮಾನರು ತೀರಿಕೊಂಡಾಗ, ಆ ಕಟ್ಟಡವನ್ನು ಹರಾಜಿಗೆ ಹಾಕಲಾಯಿತು. ಇದು ಚೆನ್ನೈನ ಭಕ್ತರನ್ನು ಖಿನ್ನರನ್ನಾಗಿಸಿತು. ಅದನ್ನು ಗಮನಿಸಿದ ರಾಮಕೃಷ್ಣಾನಂದರು ಹೀಗೆ ಹೇಳಿದರು: "ಏಕೆ ಯೋಚಿಸುವಿರಿ? ಇದನ್ನು ಯಾರು ಮಾರಾಟ ಮಾಡುತ್ತಿದ್ದಾರೆ, ಯಾರು ಕೊಳ್ಳುತ್ತಿದ್ದಾರೆ ಎಂಬ ಯೋಚನೆ ಇಲ್ಲಿ ಅನಾವಶ್ಯಕ. ನನ್ನ ಬೇಡಿಕೆಗಳು ಅತ್ಯಲ್ಪ. ಶ್ರೀರಾಮಕೃಷ್ಣರಿಗೋಸ್ಕರ ಸಣ್ಣ ಕೋಣೆಯೊಂದು ಸಾಕು ನನಗೆ. ನಾನು ಎಲ್ಲಿಯಾದರೂ ಇದ್ದುಕೊಂಡು, ಅವರನ್ನು ಸ್ಮರಿಸುತ್ತ, ಅವರ ದಿವ್ಯ ಸಂದೇಶವನ್ನು ಪಸರಿಸುತ್ತಾ, ಜೀವಿಸುತ್ತೇನೆ." ಸ್ವಾಮಿ ವಿವೇಕಾನಂದರ ಸಂನ್ಯಾಸಿಗೀತೆಯಲ್ಲಿ ಬರುವ **"ಗಗನವೇ ಮನೆ, ಹಸಿರು ಹಾಸಿಗೆ, ಬಿದಿಯು ಕೊಟ್ಟಾಹಾರವು... ಸಾಲ್ವುದೇ ಚಾಗಿಗೆ"** ಎಂಬ ಉಕ್ತಿಯನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ರಾಮಕೃಷ್ಣಾನಂದರ ಜೀವನಶೈಲಿಯು ವಿಶಿಷ್ಟವಾಗಿತ್ತು. ಮಠದ ಸೇವಾಕಾರ್ಯಗಳನ್ನು ಹೊರತುಪಡಿಸಿ, ಗುರುದೇವರ ಪೂಜೆ ಮತ್ತು ಧ್ಯಾನದಲ್ಲಿ ಅವರು ಹಲವಾರು ಗಂಟೆಗಳ ಕಾಲ ಕಳೆಯುತ್ತಿದ್ದರು. ಶ್ರೀರಾಮಕೃಷ್ಣರ ಭಾವಚಿತ್ರವು ಇವರಿಗೆ ಕೇವಲ ಚಿತ್ರವಾಗಿರದೆ, ಜೀವಂತಮೂರ್ತಿಯಾಗಿತ್ತು. ಗುರುದೇವರಿಗೆ ನಿವೇದನೆ ಮಾಡದೆ ಅವರು ಏನನ್ನೂ ಸೇವಿಸುತ್ತಿರಲಿಲ್ಲ. ಅತ್ಯಂತ ಜಾಗೃತೆಯಿಂದ ತಯಾರುಮಾಡಿದ ಪ್ರಸಾದವನ್ನು, ಶ್ರೀರಾಮಕೃಷ್ಣರನ್ನು ಜೀವಂತವಾಗಿ ಕಾಣುತ್ತಾ, ಭಕ್ತಿಯಿಂದ ನಿವೇದಿಸುತ್ತಿದ್ದರು. ಇವರ ಪೂಜೆಯನ್ನು ಕಂಡು ಜನರು ಮೂಕವಿಸ್ಮಿತರಾಗುತ್ತಿದ್ದರು. ಉದಾಹರಣೆಗೆ, ಒಮ್ಮೆ ಸರ್ಕಾರಿ ಅಧಿಕಾರಿಯೊಬ್ಬನನ್ನು ಮಠಕ್ಕೆ ಬೆಳಗ್ಗೆ ೧೦.೩೦ಕ್ಕೆ ಬರಲು ಹೇಳಿದ್ದರು. ಆ ಸಮಯದಲ್ಲಿ ಶ್ರೀರಾಮಕೃಷ್ಣರ ಪೂಜೆಯನ್ನು ಮುಗಿಸಿ, ಬೀಸಣಿಗೆಯಿಂದ ಅವರಿಗೆ ಗಾಳಿಯನ್ನು ಬೀಸುತ್ತಿದ್ದರು. ಇವರ ಈ ಅನನ್ಯ ಪೂಜಾಭಾವವನ್ನು ಕಂಡ ಆ ಅಧಿಕಾರಿಯು ಭಕ್ತಿಯಿಂದ ನಮಿಸಿ, ಅವರ ಭಾವಕ್ಕೆ ಧಕ್ಕೆಯನ್ನು ತರಲು ಇಚ್ಛಿಸದೆ, "ಮತ್ತೊಮ್ಮೆ ಬರುವೆ" ಎಂದು ಹೇಳಿ ಹೊರಟುಹೋದನು.

ಚೆನ್ನೈನ ರಾಮಕೃಷ್ಣ ಮಠದಲ್ಲಿ ಶ್ರೀರಾಮಕೃಷ್ಣರ ಜಯಂತಿ ಉತ್ಸವವನ್ನು ಮತ್ತು ದರಿದ್ರನಾರಾಯಣರ ಸೇವೆಯನ್ನು ಸ್ವಾಮಿ ರಾಮಕೃಷ್ಣಾನಂದರು ಮೊಟ್ಟಮೊದಲಿಗೆ ಪ್ರಾರಂಭಿಸಿದರು. ಇದಲ್ಲದೆ ಅವರು, ಮೈಸೂರು, ಬೆಂಗಳೂರು, ತಿರುವನಂತಪುರಂ, ಪುದುಕೋಟೆ, ಧರ್ಮಪುರಿ ಮುಂತಾದ ದಕ್ಷಿಣಭಾರತದ ಅನೇಕ ಸ್ಥಳಗಳಿಗೆ ಆಗಿಂದಾಗ್ಗೆ ಭೇಟಿಯನ್ನಿತ್ತು, ಗುರುದೇವರ ಜೀವನ-ಸಂದೇಶಗಳನ್ನು ಹರಡಿದರು. ಆ ಮೂಲಕ ದಕ್ಷಿಣಭಾರತದಲ್ಲಿ ಶ್ರೀರಾಮಕೃಷ್ಣರ ವಿಚಾರಧಾರೆಯ ಪ್ರಸಾರಕ್ಕೆ ಅವರು ಮುಖ್ಯ ಕಾರಣಕರ್ತರಾದರು.

ಒಮ್ಮೆ ಕೊಯಮತ್ತೂರಿನಲ್ಲಿ ಪ್ಲೇಗ್ ರೋಗದಿಂದ ಅನೇಕರು ಅಸು ನೀಗಿದರು. ಇದರಿಂದ ಅನೇಕ ಮಕ್ಕಳು ಅನಾಥರಾದರು. ಸ್ವಾಮಿ ರಾಮಕೃಷ್ಣಾನಂದರು ಅವರಲ್ಲಿ ಕೆಲವರಿಗೆ ಆಸರೆಯನ್ನು ನೀಡಲು ಆಲೋಚಿಸಿ, ಚೆನ್ನೈಗೆ ಕರೆತಂದರು. ಇದರ ಫಲವಾಗಿ 'ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಮ್' ಪ್ರಾರಂಭವಾಯಿತು. ಇಂದು ಈ ಸಂಸ್ಥೆಯು ಬೃಹದಾಕಾರವಾಗಿ ಬೆಳೆದು, ನೂರಾರು ಬಡ ಮತ್ತು ಅನಾಥ ಮಕ್ಕಳಿಗೆ ಉಚಿತ ಆಶ್ರಯವನ್ನೂ ವಿದ್ಯೆಯನ್ನೂ ನೀಡುತ್ತಿದೆ.

ಸ್ವಾಮಿ ರಾಮಕೃಷ್ಣಾನಂದರು ೧೯೦೩ರ ಜುಲೈ ತಿಂಗಳಿನಲ್ಲಿ, ಬೆಂಗಳೂರು ನಗರದ ಹಲಸೂರಿನಲ್ಲಿನ ವೇದಾಂತ ಸೊಸೈಟಿಯ ಆಹ್ವಾನದ ಮೇರೆಗೆ ಅಲ್ಲಿಗೆ ಭೇಟಿಯನ್ನಿತ್ತರು. ಜುಲೈ ೧೯ರಿಂದ ಆಗಸ್ಟ್ ೯ರವರೆಗೆ ಅಲ್ಲಿ ತಂಗಿದ್ದು, ಅನೇಕ ಉಪನ್ಯಾಸಗಳನ್ನು ನೀಡಿದರು. ಬೆಂಗಳೂರಿನ ದಂಡು ರೈಲ್ವೆ ನಿಲ್ದಾಣದಲ್ಲಿ ಅವರು ಬಂದಿಳಿದಾಗ ಅವರನ್ನು ಸ್ವಾಗತಿಸಲು, ೫೩ ಭಜನಾ ತಂಡಗಳೊಡನೆ ಸುಮಾರು ೪೦೦೦ ಜನರು ನೆರೆದಿದ್ದರು. ಸುಮಾರು ಮೂರು ಮೈಲಿಗಳ ಮೆರವಣಿಗೆಯೊಂದಿಗೆ ಸ್ವಾಮಿ ರಾಮಕೃಷ್ಣಾನಂದರಿಗೆ ಭವ್ಯ ಸ್ವಾಗತವನ್ನು ನೀಡಲಾಯಿತು. ಅವರ ಉಪನ್ಯಾಸಗಳನ್ನು ಕೇಳಲು ಪ್ರತಿದಿನವೂ ನೂರಾರು ಜನರು ಬರುತ್ತಿದ್ದರು. ಉನ್ನತ ಅಧಿಕಾರಿಗಳು ಮತ್ತು ನಗರದ ಗೌರವಾನ್ವಿತ ವ್ಯಕ್ತಿಗಳು ಕೂಡ ಇವರ ಉಪನ್ಯಾಸಮಂಜರಿಯಲ್ಲಿ ಮಿಂದು ಧನ್ಯತಾಭಾವದಿಂದ ಹಿಂದಿರುಗುತ್ತಿದ್ದರು. **'ಜಗತ್ತಿಗೆ ಶ್ರೀರಾಮಕೃಷ್ಣರ ಸಂದೇಶ', 'ಯೋಗ ಎಂದರೇನು?', 'ವೇದಾಂತ'** ಮುಂತಾದ ವಿಷಯಗಳ ಕುರಿತು ಅವರು ಉಪನ್ಯಾಸಗಳನ್ನು ನೀಡುತ್ತಿದ್ದರು. ಕೇಳುಗರ ಮನಸ್ಸಿಗೆ ಅದು ಬರಿಯ ಚಿಂತನೆಯಾಗದೆ, ಜೀವನದಲ್ಲಿ ಅನುಷ್ಠಾನ ಮಾಡಬಹುದಾದ ನೈಜರೂಪದ ಧರ್ಮ ಎಂದೆನಿಸುತ್ತಿತ್ತು. ಇದರಿಂದ ಪ್ರಭಾವಿತರಾದ ಭಕ್ತಸಮೂಹವು, ಅಲ್ಲೊಂದು ರಾಮಕೃಷ್ಣ ಮಹಾಸಂಘದ ಕೇಂದ್ರವೊಂದನ್ನು ಪ್ರಾರಂಭಿಸುವಂತೆ ಪ್ರಾರ್ಥಿಸಿಕೊಂಡಿತು. ಇದರಂತೆ, ೧೯೦೪ರ ಆಗಸ್ಟ್‌ನಲ್ಲಿ ರಾಮಕೃಷ್ಣಾನಂದರು ಸ್ವಾಮಿ ಆತ್ಮಾನಂದರ ಜೊತೆ ಬೆಂಗಳೂರಿಗೆ ಬಂದಿಳಿದರು. ಹಲವಾರು ಉಪನ್ಯಾಸಗಳನ್ನು ನೀಡಿದ ಬಳಿಕ, ಸ್ವಾಮಿ ಆತ್ಮಾನಂದರನ್ನು ಅಲ್ಲಿಯೇ ಇರಲು ಹೇಳಿ ಚೆನ್ನೈಗೆ ತೆರಳಿದರು.

೧೯೦೩ರ ಅಕ್ಟೋಬರ್ ತಿಂಗಳಿನಲ್ಲಿ ಸ್ವಾಮಿ ರಾಮಕೃಷ್ಣಾನಂದರು ಮೈಸೂರಿಗೆ ಭೇಟಿಯನ್ನಿತ್ತರು. ಇಲ್ಲಿ ಐದು ಉಪನ್ಯಾಸಗಳನ್ನು ನೀಡಿದರು. ಅಲ್ಲಿನ ಸಂಸ್ಕೃತ ಪಾಠಶಾಲೆಯಲ್ಲಿ ನೆರೆದಿದ್ದ ಪಂಡಿತರ ಸಮ್ಮುಖದಲ್ಲಿ, 'ವೇದಾಂತದ ಮೂರು ತತ್ತ್ವಸಿದ್ಧಾಂತಗಳು ಹಾಗೂ